ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಸಭೆ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE 23/1/2020

# ನಿಗೂಢ ಸ್ಫೋಟ; ಶಾಸಕ ಹ್ಯಾರಿಸ್‌ಗೆ ಪೆಟ್ಟು, ಪ್ರಕ್ಷುಬ್ಧ ಸ್ಥಿತಿ

ಸಂಕ 23/1/20

ಸಂ.ಕ.ಸಮಾಚಾರ, ಬೆಂಗಳೂರು

- ಜನ್ಮದಿನದ ಕಾರ್ಯಕ್ರಮದಲ್ಲಿ ಸ್ಫೋಟ
- ಶಾಸಕರ ಕುರ್ಚಿ ಬಳಿ ಬಿದ್ದ ಸ್ಫೋಟದ ವಸ್ತು
- ಶಾಸಕ ಸೇರಿ ನಾಲ್ಕೈದು ಜನರಿಗೆ ಗಾಯ
- ಉದ್ದೇಶಪೂರ್ವಕ ಕೃತ್ಯದ ಶಂಕೆ

ಶಾಂತಿನಗರದಲ್ಲಿ ಬುಧವಾರ ರಾತ್ರಿ ನಡೆದಿರುವ ರಸಮಂಜರಿ ಕಾರ್ಯಕ್ರಮದ ಸಮಯದಲ್ಲಿ ಸಂಭವಿಸಿದ ನಿಗೂಢ ಸ್ಫೋಟದಲ್ಲಿ ಸ್ಥಳೀಯ ಕಾಂಗ್ರೆಸ್ ಶಾಸಕ ಎನ್.ಎ.ಹ್ಯಾರಿಸ್ ಸೇರಿದಂತೆ ನಾಲ್ಕೈದು ಜನರಿಗೆ ಸಣ್ಣಪುಟ್ಟ ಗಾಯವಾಗಿರುವ ಬಗ್ಗೆ ಮಾಧ್ಯಮಗಳಲ್ಲಿ ವರದಿಯಾಗಿದೆ.

ಶಾಸಕ ಹ್ಯಾರಿಸ್ ಅವರ ಜನ್ಮದಿನದಂಗವಾಗಿ ಶಾಂತಿನಗರದಲ್ಲಿ ಆಯೋಜಿಸಲಾಗಿದ್ದ ಖಾಸಗಿ ರಸಮಂಜರಿ ಕಾರ್ಯಕ್ರಮಕ್ಕೆ ಅವರನ್ನು ಮುಖ್ಯ ಅತಿಥಿಯಾಗಿ ಆಹ್ವಾನಿಸಲಾಗಿತ್ತು. ಶಾಸಕರು ಕಾರ್ಯಕ್ರಮ ಸ್ಥಳಕ್ಕೆ ಆಗಮಿಸಿದ ವೇಳೆ ಸ್ಫೋಟ ಸಂಭವಿಸಿದ್ದು ಅವರ ಕಾಲಿನ ಭಾಗಕ್ಕೆ ಗಾಯವಾಗಿವೆ. ಹೀಗಾಗಿ ಶಾಸಕರೂ ಸೇರಿದಂತೆ ಗಾಯಾಳುಗಳನ್ನು ಸಮೀಪದ ಸೈಂಟ್ ಫಿಲೋಮಿನಾ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ವರದಿಗಳು ತಿಳಿಸಿವೆ.

ಸ್ಫೋಟದಲ್ಲಿ ಶಾಸಕರು ಗಾಯಗೊಂಡ ಸುದ್ದಿ ತಿಳಿದು ಆತಂಕಗೊಂಡ ಅವರ ಬೆಂಬಲಿಗರು ಮತ್ತು ಸಾರ್ವಜನಿಕರು ಆಸ್ಪತ್ರೆ ಮುಂದೆ ಜಮಾಯಿಸಿದರು.

ಅಶೋಕ್ ನಗರ ಹಾಗೂ ವಿವೇಕ ನಗರ ಠಾಣಾ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದ್ದಾರೆ. ಘಟನೆ ಕುರಿತಂತೆ ಶಾಸಕರ ಪುತ್ರ ಮೊಹಮ್ಮದ್ ನಲ್ಪಾಡ್ ಹೇಳಿಕೆ ನೀಡಿ, ಇದೊಂದು ಉದ್ದೇಶಪೂರ್ವಕ ಕೃತ್ಯ ಎಂದು ಶಂಕಿಸಿದ್ದಾರೆ. ಕಾರ್ಯಕ್ರಮದಲ್ಲಿ ಶಾಸಕರಿಗೆ ವಿಶೇಷ ಆಸೀನ ಇರಿಸಲಾತ್ತು. ಆದರೆ ಶಾಸಕರು ಆ ವಿಶೇಷ ಆಸನದಲ್ಲಿ ಕುಳಿತುಕೊಳ್ಳದೇ ಪಕ್ಕದ ಕುರ್ಚಿಯಲ್ಲಿ ಕುಳಿತರು.

ಆಗ ಜನರ ಮಧ್ಯೆಯಿಂದ ಯಾವುದೇ ವಸ್ತು ತೂರಿ ಬಂದು ಶಾಸಕರ ಕಾಲಪಕ್ಕದಲ್ಲಿ ಬಿದ್ದು ಸ್ಫೋಟಗೊಂಡಿತು. ಇದರಿಂದ ಶಾಸಕರ ಕಾಲಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಅವರ ಜೊತೆಗಿದ್ದ ಸ್ನೇಹಿತರೊಬ್ಬರಲ್ಲದೆ, ಸಮೀಪದಲ್ಲಿ ಇನ್ನೂ ಮೂರ‍್ನಾಲ್ಕು ಜನರಿಗೆ ಗಾಯಗಳಾಗಿವೆ. ದೇವರ ದಯೆಯಿಂದ ತಮ್ಮ ತಂದೆ ಸ್ಫೋಟದಲ್ಲಿ ಪಾರಾಗಿದ್ದಾರೆ. ಸ್ಫೋಟ ಕುರಿತು ಪೊಲೀಸರಿಗೆ ಮಾಹಿತಿ ನೀಡಿದ್ದೇವೆ. ಪೊಲೀಸರು ಸೂಕ್ತ ರೀತಿಯ ತನಿಖೆ ನಡೆಸುವ ಭರವಸೆ ಇದೆ ಎಂದಿದ್ದಾರೆ.